## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2012-13ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದ ಕಾರ್ಯಕ್ರಮವಾದ ಪ್ರತಿ ಜಿಲ್ಲಾ ಪಂಚಾಯತಿಗೆ ₹ 2.00 ಕೋಟಿಗಳ ಅಭಿವೃದ್ಧಿ ಅನುದಾನವನ್ನು ಒದಗಿಸುವ ಬಗ್ಗೆ.

**ಓದಲಾಗಿದೆ:**

(1) ಮಾನ್ಯ ಮುಖ್ಯಮಂತ್ರಿಗಳ 2012-13ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-84ರನ್ವಯ.

(2) ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 127 ಜಿಪಸ 2011, ದಿನಾಂಕ: 25.05.2011, 15.07.2011, 23.09.2011., 29.10.2011.

(3) ಸರ್ಕಾರಿ ಆದೇಶ ಸಂ.ಗ್ರಾಅಪ 109 ಜಿಪಸ 2012, ದಿನಾಂಕ 21.06.2012.

**ಪ್ರಸ್ತಾವನೆ:**

ಮಾನ್ಯ ಮುಖ್ಯಮಂತ್ರಿಗಳು 2012-13ನೇ ಸಾಲಿನ ಆಯವ್ಯಯ ಭಾಷಣದ ಮೇಲೆ ದಿನಾಂಕ:21-3-2012 ರಂದು ನಡೆದ ಚರ್ಚೆಯಲ್ಲಿ ಉತ್ತರ ನೀಡುವ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಜಿಲ್ಲಾ ಪಂಚಾಯತ್ ಗಳಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಅನುದಾನವನ್ನು ನೀಡಲು ನಿರ್ಧರಿಸಿರುವಂತೆ ಲೆಕ್ಕ ಶೀರ್ಷಿಕೆ 2515-00-101-0-31-051 ಲಿಂಕ್ ಕೋಡ್ ಲೆ.ಶೀ.2515-00-196-1-22-300 (ಯೋಜನೆ) ರಡಿ ₹ 6000.00 ಲಕ್ಷ ಆಯವ್ಯಯ ಒದಗಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ ಜಿಲ್ಲಾ ಪಂಚಾಯತಿಗೆ ಒದಗಿಸಿರುವ ಅಭಿವೃದ್ಧಿ ಅನುದಾನದಲ್ಲಿ ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನಗೊಳಿಸುವ ಬಗ್ಗೆ ಸವಿವರವಾಗಿ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಮೇಲೆ ಓದಲಾದ (3)ರ ಸರ್ಕಾರಿ ಆದೇಶದಲ್ಲಿ 2012-13ನೇ ಸಾಲಿನ ಮೊದಲನೇ ಕಂತಿನ ಅನುದಾನ ಪ್ರತಿ ಜಿಲ್ಲಾ ಪಂಚಾಯತಿಗೆ ರೂ.50.00 ಲಕ್ಷಗಳಂತೆ ಒಟ್ಟು ರೂ.1500.00 ಲಕ್ಷಗಳನ್ನು (ರೂ.15.00 ಕೋಟಿಗಳು) ಬಿಡುಗಡೆ ಮಾಡಲಾಗಿದೆ. 2012-13ನೇ ಸಾಲಿನ 2ನೇ ತ್ರೈಮಾಸಿಕ ಅನುದಾನ ಪ್ರತಿ ಜಿಲ್ಲಾ ಪಂಚಾಯತಿಗೆ ರೂ.50.00 ಲಕ್ಷದಂತೆ ಒಟ್ಟು ರೂ.1500.00 ಲಕ್ಷಗಳನ್ನು (ರೂ.15.00 ಕೋಟಿಗಳು) ಬಿಡುಗಡೆ ಮಾಡಲಾಗಿದೆ. 2012-13ನೇ ಸಾಲಿನ 3ನೇ ತ್ರೈಮಾಸಿಕ ಅನುದಾನ ಪ್ರತಿ ಜಿಲ್ಲಾ ಪಂಚಾಯತಿಗೆ ರೂ.50.00 ಲಕ್ಷದಂತೆ ಒಟ್ಟು ರೂ.1500.00 ಲಕ್ಷಗಳನ್ನು (ರೂ.15.00 ಕೋಟಿಗಳು) ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ: 109:ಜಿಪಸ:2012**
**ಬೆಂಗಳೂರು ದಿನಾಂಕ: 20-10-2012**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಲೆಕ್ಕ ಶೀರ್ಷಿಕೆ 2515-00-101-0-31-051 ರಡಿಯಲ್ಲಿ ಲಿಂಕ್ ಡಾಕ್ಯುಮೆಂಟ್ 2515-00-196-1-22-300 (ಯೋಜನೆ) ಪ್ರತಿ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನ ₹ 200.00 ಲಕ್ಷದಲ್ಲಿ ಪ್ರತಿ ಜಿಲ್ಲಾ ಪಂಚಾಯತಿಗೆ ಮೂರನೇ ತ್ರೈಮಾಸಿಕ ಕಂತಾಗಿ ₹ 50.00 ಲಕ್ಷದಂತೆ (ರೂಪಾಯಿ ಐವತ್ತು ಲಕ್ಷಗಳು ಮಾತ್ರ) ಒಟ್ಟು 30 ಜಿಲ್ಲಾ ಪಂಚಾಯತ್‌ಗಳಿಗೆ ₹ 1500.00 ಲಕ್ಷಗಳನ್ನು (ರೂಪಾಯಿ ಸಾವಿರದ ಐನ್ನೂರು ಲಕ್ಷಗಳು ಮಾತ್ರ) ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಂತೆ ಬಿಡುಗಡೆಗೊಳಿಸಲಾಗಿದೆ.

ಸರ್ಕಾರದಿಂದ ಹೊರಡಿಸಿರುವ ಮಾರ್ಗಸೂಚಿಯನ್ವಯ ಕಡ್ಡಾಯವಾಗಿ 2012-13ನೇ ಸಾಲಿನ ಕ್ರಿಯಾ ಯೋಜನೆಯನ್ನು ತಯಾರಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವುದು. ಈ ಹಿಂದೆ ನೀಡಿರುವ ಮಾರ್ಗಸೂಚಿಗಳನ್ನು ಮುಂದುವರೆಸುತ್ತಾ, ಈ ಕೆಳಕಂಡ ಷರತ್ತುಗಳನ್ನು ಸಹ ಹೊರಡಿಸಿದೆ.

2012-13ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿರುವ ವಾರ್ಷಿಕ ಆಯವ್ಯಯ ರೂ.200.00 ಲಕ್ಷಗಳನ್ನು ಒದಗಿಸಲಾಗಿದೆ. ಈ ಅನುದಾನಕ್ಕೆ ಜಿಲ್ಲಾ ಪಂಚಾಯತಿಗಳು ಮಾರ್ಗಸೂಚಿಯನ್ವಯ ಗ್ರಾಮ ಸಭೆಗಳ ಶಿಫಾರಸ್ಸಿನ ಕ್ರಿಯಾ ಯೋಜನೆಯನ್ನು ತಯಾರಿಸಿ ಜಿಲ್ಲಾ ಪಂಚಾಯತಿಯ ಅನುಮೋದನೆ ಪಡೆದು ಚಾಲ್ತಿಯಲ್ಲಿರುವ ನಿಯಮಗಳಡಿಯಲ್ಲಿ ಹಾಗು ಕರ್ನಾಟಕ ಪಂ.ರಾಜ್ ಅಧಿನಿಯಮ, 1993 ರಲ್ಲಿ ಉಲ್ಲೇಖಿಸಿರುವ ನಿಯಮಗಳನ್ವಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

**ವಾರ್ಷಿಕ ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯತಿಗಳ ವೆಬ್‌ಸೈಟ್‌ನಲ್ಲಿ ಅಳವಡಿಸುವುದು. ಇದನ್ನು ಸತತವಾಗಿ ಹೇಳುತ್ತಿದ್ದರೂ ಇನ್ನು ಯಾರು ಕಾಮಗಾರಿವಾರು ಪ್ರದರ್ಶಿಸಿರುವುದಿಲ್ಲ. ಇಂದಿನಿಂದ 15 ದಿನದೊಳಗೆ ಪ್ರದರ್ಶಿಸಿಲ್ಲದಿದ್ದಲ್ಲಿ ಇದಕ್ಕೆ ನೇರವಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.**

ಭೌತಿಕ ಹಾಗು ಆರ್ಥಿಕ ಪ್ರಗತಿ ವರದಿಗಳನ್ನು ಜಿಲ್ಲಾ ಪಂಚಾಯತಿ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸುವುದು.

ಈ ಅನುದಾನದಲ್ಲಿ ಕೈಗೊಳ್ಳುವ ಎಲ್ಲಾ ಯೋಜನೆಗಳನ್ನು ಕಡ್ಡಾಯವಾಗಿ Worksoft ತಂತ್ರಾಂಶದಲ್ಲಿ ಅಳವಡಿಸುವುದು.

ಆರ್ಥಿಕ ಮತ್ತು ಭೌತಿಕ ಪ್ರಗತಿ ವರದಿಯನ್ನು ಪ್ರತಿ ತಿಂಗಳ 7ನೇ ತಾರೀಖಿನೊಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

Non-diversion, Non-embazzlement certificate ಹಾಗು ಮಾರ್ಗಸೂಚಿಯನ್ವಯ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ ಎಂಬುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದೃಢೀಕರಿಸತಕ್ಕದ್ದು.

ಹಣ ಬಳಕೆ ಪ್ರಮಾಣ ಪತ್ರಗಳನ್ನು ಸರ್ಕಾರಕ್ಕೆ ಮುಖ್ಯ ಲೆಕ್ಕಾಧಿಕಾರಿಗಳು ಹಾಗು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದೃಡೀಕರಿಸಿ ಸಲ್ಲಿಸುವುದು.

2011–12ನೇ ಸಾಲಿನಲ್ಲಿ ಈ ಯೋಜನೆಯಲ್ಲಿ ಅನುಷ್ಠಾನಗೊಳಿಸಲಾದ ಕಾರ್ಯಕ್ರಮಗಳ ಯಶೋಗಾಥೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.

ಈ ಅನುದಾನವನ್ನು ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ: ಆಇ:261:ವೆಚ್ಚ–6:2012 ದಿನಾಂಕ: 15–09–2012 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

20/10/12
(ಮಾರ್ಗರೇಟ್ ಲೀನಾ ನರೋನ್ಹ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

20.10.2012

**ಗೆ:**

(1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
(2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಗ್ರಾಅಪಂ.ರಾಜ್ ಇಲಾಖೆ
(3) ಎಲ್ಲಾ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
(4) ಎಲ್ಲಾ ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತಿ.
(5) ವಿಶೇಷಾಧಿಕಾರಿಗಳು (ಜಿ.ಪಂ) ಆರ್ಥಿಕ ಇಲಾಖೆ
(6) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.ಪಂ. ಇಲಾಖೆ
(7) ಉಪ ನಿರ್ದೇಶಕರು, ಖಜಾನೆ ಗಣಕ ಜಾಲ, ಖನಿಜ ಭವನ, ಬೆಂಗಳೂರು.
(8) ಸಂಬಂಧಪಟ್ಟ ಜಿಲ್ಲಾ ಖಜಾನೆ ಅಧಿಕಾರಿಗಳು
(9) ಕಂಪ್ಯೂಟರ್ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

ಪು.ತಿ.ನೋ

**<u>ಅನುಬಂಧ</u>**

**<u>ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ:109:ಜಿಪಸ:2012 ದಿನಾಂಕ:20-10-2012</u>**

(₹ ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಜಿಲ್ಲಾ ಪಂಚಾಯತಿಗಳ ಹೆಸರು | ಜಿಲ್ಲಾ ಪಂಚಾಯತಿಗಳಿಗೆ ನಿಗದಿಪಡಿಸಿರುವ ಅನುದಾನದ ವಿವರ | ಮೂರನೇ ಕಂತಿನ ಅನುದಾನ |
|---|---|---|---|
| 1. | ಬಾಗಲಕೋಟೆ | 200.00 | 50.00 |
| 2 | ಬೆಂಗಳೂರು( ಗ್ರಾ) | 200.00 | 50.00 |
| 3 | ಬೆಂಗಳೂರು( ನಗರ) | 200.00 | 50.00 |
| 4 | ಬೆಳಗಾಂ | 200.00 | 50.00 |
| 5 | ಬಳ್ಳಾರಿ | 200.00 | 50.00 |
| 6 | ಬೀದರ್ | 200.00 | 50.00 |
| 7 | ಬಿಜಾಪುರ | 200.00 | 50.00 |
| 8 | ಚಾಮರಾಜನಗರ | 200.00 | 50.00 |
| 9 | ಚಿಕ್ಕಬಳ್ಳಾಪುರ | 200.00 | 50.00 |
| 10 | ಚಿಕ್ಕಮಗಳೂರು | 200.00 | 50.00 |
| 11 | ಚಿತ್ರದುರ್ಗ | 200.00 | 50.00 |
| 12 | ದಕ್ಷಿಣ ಕನ್ನಡ | 200.00 | 50.00 |
| 13 | ದಾವಣಗೆರೆ | 200.00 | 50.00 |
| 14 | ಧಾರವಾಡ | 200.00 | 50.00 |
| 15 | ಗದಗ್ | 200.00 | 50.00 |
| 16 | ಗುಲ್ಬರ್ಗಾ | 200.00 | 50.00 |
| 17 | ಹಾಸನ | 200.00 | 50.00 |
| 18 | ಹಾವೇರಿ | 200.00 | 50.00 |
| 19 | ಕೊಡಗು | 200.00 | 50.00 |
| 20 | ಕೋಲಾರ | 200.00 | 50.00 |
| 21 | ಕೊಪ್ಪಳ | 200.00 | 50.00 |
| 22 | ಮಂಡ್ಯ | 200.00 | 50.00 |
| 23 | ಮೈಸೂರು | 200.00 | 50.00 |
| 24 | ರಾಯಚೂರು | 200.00 | 50.00 |
| 25 | ರಾಮನಗರ | 200.00 | 50.00 |
| 26 | ಶಿವಮೊಗ್ಗ | 200.00 | 50.00 |
| 27 | ತುಮಕೂರು | 200.00 | 50.00 |
| 28 | ಉತ್ತರ ಕನ್ನಡ | 200.00 | 50.00 |
| 29 | ಉಡುಪಿ | 200.00 | 50.00 |
| 30 | ಯಾದಗಿರಿ | 200.00 | 50.00 |
| | **ಒಟ್ಟು** | **6000.00** | **1500.00** |

(signature) 20/10/12

Under Secy. to Govt. (ZP)

Rural Devt. & Pan[illegible]

20-10-2012